International Journal of Kannada Research
www.kannadajournal.com

**ISSN: 2454–5813**
IJKR 2021; 7(1): 115-121
© 2021 IJKR
www.kannadajournal.com
Received: 28-11-2020
Accepted: 30-12-2020

**ಡಾ.ಸೀತಾ.ಹೆಚ್.ಎನ್.**
ಕನ್ನಡ ಸಹಾಯಕ ಪ್ರಾಧ್ಯಾಪಕರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ನಂಜನಗೂಡು.

**Corresponding Author:**
**ಡಾ.ಸೀತಾ.ಹೆಚ್.ಎನ್.**
ಕನ್ನಡ ಸಹಾಯಕ ಪ್ರಾಧ್ಯಾಪಕರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ನಂಜನಗೂಡು.

# ಡಾ .ರಾಗೌ (ರಾಮೇಗೌಡ)

**ಡಾ.ಸೀತಾ.ಹೆಚ್.ಎನ್.**

ಪ್ರೊಫೆಸರ್ ರಾಗೌ ಅವರು ನುರಿತ ಪ್ರಾಧ್ಯಾಪಕರು, ಕವಿ, ಜಾನಪದ ತಜ್ಞರು, ಪರಿಣಿತ ವಿಮರ್ಶಕರು, ಸುಲಲಿತ ವಾಗ್ಮಿ, ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪಾಂಡಿತ್ಯ ಪಡೆದವರು.ಕನ್ನಡ ಸಾರಸ್ವತ ಲೋಕದಲ್ಲಿ “ರಾಗೌ”ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಇವರು ಆಧುನಿಕ ಕನ್ನಡ ಸಾಹಿತ್ಯಗಳಲ್ಲಿ ಅಗ್ರಮಾನ್ಯ ವಿದ್ವಾಂಸರು. ಕಾವ್ಯ, ನಾಟಕ, ವಿಮರ್ಶೆ, ಗ್ರಂಥ ಸಂಪಾದನೆ ಮತ್ತು ಸಂಶೋಧನೆಗಳು ಅವರ ಸಾಹಿತ್ಯ ಕೃಷಿಯ ಮುಖ್ಯ ಮುಖಗಳು.

ರಾಗೌ ಮದ್ದೂರು ತಾಲ್ಲೂಕು ಬೆಸಗರಹಳ್ಳಿ ಸಮೀಪದ ಈರೇಗೌಡನ ದೊಡ್ಡಿಯಲ್ಲಿ ಮಾಸ್ತಿಗೌಡ ಹಾಗೂ ತಾಯಿ ನಿಂಗಮ್ಮನವರ ಪುತ್ರನಾಗಿ 1942 ಏಪ್ರಿಲ್ 3 ರಂದು ಸಾಮಾನ್ಯ ರೈತ ಕುಟುಂಬದಲ್ಲಿ ಜನಿಸಿದರು.ತಂದೆ ತಾಯಿಗಳು ಹಾಗೂ ಕುಟುಂಬದವರು ಇವರಿಗೆ ಇಟ್ಟ ಹೆಸರು ರಾಮೇಗೌಡ. ಪಡೆದ ವಿದ್ಯೆಯಿಂದ ಡಾ.ರಾಮೇಗೌಡ. ಕಾವ್ಯನಾಮವಾಗಿ 'ರಾಗೌ' ಎಂದು ಪ್ರಸಿದ್ಧರಾಗಿದ್ದಾರೆ. ಅವಿಭಕ್ತ ಕುಟುಂಬದಲ್ಲಿ ಜನಿಸಿದ ರಾಗೌ ವರ್ಷ ತುಂಬುವುದರೊಳಗೆ ತಾಯಿಯನ್ನು, ಎಂಟು ಒಂಬತ್ತು ವರ್ಷದೊಳಗೆ ತಂದೆಯನ್ನು ಕಳೆದುಕೊಂಡರು. ದುರದೃಷ್ಟಗಳ ಸರಮಾಲೆಯ ಹೋರಾಟದಲ್ಲಿ ಸಾಹಿತ್ಯದ ಮೂಲಕ ಸಾಂತ್ವನವನ್ನು ಕಂಡುಕೊಂಡು ತಮ್ಮದೇ ಆದ ವ್ಯಕ್ತಿತ್ವವನ್ನು ಸ್ವಯಾರ್ಜಿತವಾಗಿ ರೂಪಿಸಿಕೊಂಡ ಹೋರಾಟದ ಬದುಕು ರಾ.ಗೌ ಅವರದು. ತಂದೆಗೆ ಮಗನನ್ನು ದೊಡ್ಡ ವಿದ್ಯಾವಂತನನ್ನಾಗಿ ಮಾಡಬೇಕೆಂಬ ಅಕಾಂಕ್ಷೆ ಇದ್ದಿತಂತೆ. ಆದರೆ ಬಾಲ್ಯದಲ್ಲಿಯೇ ತಂದೆ ತಾಯಿಯನ್ನು ಕಳೆದುಕೊಂಡ ರಾಗೌ ಅವರಿಗೆ ದೊಡ್ಡಪ್ಪ, ಚಿಕ್ಕಪ್ಪನವರ ಪ್ರೀತಿ ಅವರ ಪಾಲಿಗೆ ಸಂಜೀವಿನಿಯಾಯಿತು.ತಂದೆಯ ಅಪೂರ್ವ ಅಕಾಂಕ್ಷೆಯನ್ನು ಈಡೇರಿಸಿಕೊಳ್ಳಲು ನೆರವಾದ ದೊಡ್ಡಪ್ಪ ಚಿಕ್ಕಪ್ಪಂದಿರ ಬಗೆಗೆ ಕೃತಜ್ಞತಾಭಾವ ಬೆರೆತ ಗೌರವವನ್ನು ಇರಿಸಿಕೊಂಡಿದ್ದಾರೆ. ಈಗಲೂ ಎಲ್ಲಿಯಾದರೂ ಅವರನ್ನು ಗೌರವಿಸುವ. ಸನ್ಮಾನಿಸುವ, ಸಮಾರಂಭವನ್ನು ಯಾರಾದರೂ ಹಮ್ಮಿಕೊಂಡರೆ,ಅವರು ತಮಗೆ ಪೋಷಣೆ ಹಾಗೂ ಪ್ರೋತ್ಸಾಹವನ್ನು ನೀಡಿದ ಆ ಹಿರಿಯರನ್ನು ನೆನಪಿಸಿಕೊಂಡೇ ಮುಂದಿನ ಮಾತುಗಳನ್ನಾಡುವುದು.

ರಾಗೌ ತಮ್ಮ ಬೆಳವಣಿಗೆಗೆ ಕಾರಣವಾದ ಆ ಮನೆಯ ಮಂದಿಯ ಜೊತೆ ಮುಂದಿನ ತಲೆಮಾರಿನವರ, ಕಿರಿಯರ ಜೊತೆ ಮಧುರವಾದ ಸಂಬಂಧವನ್ನು ಕಾಪಾಡಿಕೊಂಡು ಬಂದಿದ್ದಾರೆ. ರಾಗೌ ಅವರ ಬಂಧುತ್ವದ ಎಳೆಗಳು ಕೇವಲ ಕೌಟುಂಬಿಕ ಸಂಬಂಧಗಳಿಗಷ್ಟೇ, ಸೀಮಿತವಾಗಿಲ್ಲ. ತಮ್ಮ ಸಂಪರ್ಕಕ್ಕೆ ಬರುವ

ವಿದ್ಯಾರ್ಥಿಗಳು, ಸಹೋದ್ಯೋಗಿಗಳು, ಮಿತ್ರರು ಸೇರಿದಂತೆ ಎಲ್ಲ ಬಗೆಯ ಜನರೊಡನೆ ಉತ್ತಮ ಸಂಬಂಧವನ್ನು ಇರಿಸಿಕೊಳ್ಳಲು ಅವರು ಹವಣಿಸುತ್ತಾರೆ.

ರಾಗೌ ಅವರು ಪ್ರಾಥಮಿಕ ಹಾಗೂ ಮಾಧ್ಯಮಿಕ ವಿದ್ಯಾಭ್ಯಾಸವನ್ನು ಹುಟ್ಟಿದೂರಿಗೆ ಸಮೀಪವಾದ ಬೆಸಗರಹಳ್ಳಿಯಲ್ಲಿ ಮುಗಿಸಿದರು. ಪ್ರೌಢಶಾಲಾ ಶಿಕ್ಷಣವನ್ನು ತಾಲ್ಲೂಕು ಕೇಂದ್ರವಾದ ಮದ್ದೂರಿನಲ್ಲಿ 1959 ರಲ್ಲಿ ಪ್ರಥಮ ದರ್ಜೆಯೊಂದಿಗೆ ಪಡೆದರು. ಅನಕ್ಷರಸ್ಥರ ಪರಿಸರದಿಂದ ಬಂದ ಮಕ್ಕಳಿಗೆ ಇರುವಂತೆ ರಾ ಗೌ ಅವರಿಗೂ ಅಕ್ಷರ ಕಲಿಕೆಯ ಬಗೆಗೆ. ಆ ಮೂಲಕ ತಲುಪಬೇಕಾದ ಗುರಿಯ ಬಗೆಗೆ ಅಸ್ಪಷ್ಟತೆಗಳಿದ್ದವು. ಅನಿಶ್ಚತತೆಯೂ ಇತ್ತು.ಅದರೆ ಮದ್ದೂರಿನ ಪುರಸಭಾ ಕಛೇರಿಯಲ್ಲಿ ಸಣ್ಣನೌಕರರಾಗಿದ್ದ ಇವರ ತಂದೆಗೆ ಮಗನನ್ನು ದೊಡ್ಡ ವಿದ್ಯಾವಂತನನ್ನಾಗಿ ಮಾಡಬೇಕೆಂಬ ಅಪೇಕ್ಷೆ ಉತ್ಕಟವಾಗಿತ್ತು.ಮಗನ ಓದಿಗಾಗಿ ಆ ತಂದೆ ಹೆಚ್ಚುಕಾಲ ಬದುಕದೇ ಹೋದದು ಮಾತ್ರ ದುರದೃಷ್ಟ. ಈ ಸಂದರ್ಭದಲ್ಲಿ ಅದೃಷ್ಟದ ವ್ಯಕ್ತ ರೂಪವಾಗಿ ನಿಂತವರು ದೊಡ್ಡಪ್ಪ, ಚಿಕ್ಕಪ್ಪಂದಿರು. ಅವರು ತೋರಿದ ಅಕ್ಕರೆಯನ್ನು ರಾಗೌ ದುರುಪ ಯೋಗಪಡಿಸಿಕೊಳ್ಳದೆ ಕಷ್ಟಪಟ್ಟು ಓದಿದರು. ಮನೆಯಲ್ಲಿ ಬೇಸಾಯದ ಕೆಲಸಗಳಲ್ಲಿ ನೆರವಾಗುತ್ತಿದ್ದರು. ಇವರ ವಿದ್ಯಾಭ್ಯಾಸಕ್ಕೆ ಬೆಸಗರಹಳ್ಳಿಯ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಯ ಮುಖ್ಯೋಪಧ್ಯಾಯರುಗಳಾಗಿದ್ದ ರಾಮಣ್ಣ ಹಾಗೂ ಸುಬ್ಬಣ್ಣನವರ ಪ್ರೋತ್ಸಾಹ ಸಹಕಾರವೂ ದೊರೆಯಿತು.

ರಾಗೌ ಪೋಷಕರಿಗೆ ಮಗ ಇಂಜಿನಿಯರ್ ಆಗಬೇಕೆಂಬ ಆಸೆಯಿದ್ದ ಕಾರಣದಿಂದಾಗಿ ಮೈಸೂರಿನ ಯುವರಾಜ ಕಾಲೇಜಿಗೆ ಸೇರಿ ಪಿ,ಸಿ.ಎಂ ವಿಷಯದಲ್ಲಿ ಶಿಕ್ಷಣ ಪಡೆದರು. ಆದರೆ ಕನ್ನಡ ಪ್ರೀತಿ, ಸಾಹಿತ್ಯಾಸಕ್ತಿ, ಭಾವತಲ್ಲೀನತೆ ಇದ್ದ ರಾಗೌ ಅವರು ವಿಜ್ಞಾನ ವಿಷಯಗಳಲ್ಲಿ ಆಸಕ್ತಿ ಬೆಳೆಯಲಿಲ್ಲ. ರಾಗೌ ಶೈಕ್ಷಣಿಕ ಪ್ರಗತಿಯನ್ನಷ್ಟೇ ತೋರಿದರು. ಅದರಂತೆ ಬೆಂಗಳೂರಿನಲ್ಲಿ ಅವರಿಗೆ ಎಂಜಿನಿಯರ್ಗೆ ಸೀಟು ಕೂಡ ಸಿಕ್ಕಿತು, ಆದರೆ ಅದೇ ವೇಳೆಯಲ್ಲಿ ಕನ್ನಡ ಓದಲು ಮಹಾರಾಜ ಕಾಲೇಜಿಗೂ ಅರ್ಜಿ ಹಾಕಿದ್ದರಿಂದ ಅವರ ನಿರ್ಧಾರ ಬೆಂಗಳೂರಿಗೆ ಹೋಗುವ ಬದಲು ಮಹಾರಾಜ ಕಾಲೇಜಿನಲ್ಲಿ ಬಿ.ಎ ಓದಲು ಬಯಸಿತು. ಬಿ.ಎ. ಓದುವಾಗ ಕನ್ನಡವನ್ನು ಮೇಜರ್ ಆಗಿಯೂ, ಭಾಷಾ ವಿಜ್ಞಾನವನ್ನು ಮೈನರ್ ಅಗಿಯೂ, ತೆಗೆದುಕೊಂಡರು. ಆ ಸಮಯದಲ್ಲಿ ಡಿ.ಎಲ್.ನರಸಿಂಹಾಚಾರ್. ಜೆ.ವರದರಾಜರಾವ್. ಹಾ.ಮಾ.ನಾಯಕ್, ಉ.ಕಾ. ಸುಬ್ಬರಾಯಚಾರ್, ಸುಜನಾ, ಯು.ಅರ್. ಅನಂತ ಮೂರ್ತಿ ಮೊದಲಾದ ಗುರುವೃಂದ ರಾಗೌ ಅವರಿಗೆ ಲಭಿಸಿತು. ಕಾಲೇಜು ದಿನಗಳಲ್ಲೇ ಬರಹ ಅರಂಭಿಸಿದ ರಾಗೌ ಅವರ ಕವಿತೆಗಳು ಪ್ರಬುದ್ಧ ಕರ್ನಾಟಕ ಹಾಗೂ ವಾರ್ಷಿಕ ಸಂಚಿಕೆಗಳಲ್ಲಿ ಪ್ರಕಟವಾದವು. ಈ ಮೂಲಕ ರಾಗೌ ಅಧ್ಯಾಪಕ ವರ್ಗದ ಮೆಚ್ಚುಗೆಗೆ ಪಾತ್ರರಾದರು,ನನ್ನ ಸಾಹಿತ್ಯಾಸಕ್ತಿಗೆ ಮತ್ತು ಬರವಣಿಗೆಯ ಪ್ರಕ್ರಿಯೆಗೆ ಮಹಾರಾಜ ಕಾಲೇಜು ತಳಹದಿ ಹಾಕಿಕೊಟ್ಟಿತ್ತೆಂಬುದು ರಾಗೌ ಅವರ ಅಭಿಪ್ರಾಯ. ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗದಲ್ಲಿ ಕನ್ನಡ ಎಂ.ಎ ಓದಲು ಸೇರಿಕೊಂಡ ಇವರು 1965 ರಲ್ಲಿ ಎಂ.ಎ ಪದವಿಯನ್ನು ಪ್ರಥಮ ಶ್ರೇಣಿಯಲ್ಲಿ ಚಿನ್ನದ ಪದಕ ಹಾಗೂ ಬಹುಮಾನದೊಂದಿಗೆ ಪಡೆದರು. ಈ ವೇಳೆಗಾಗಲೇ ಲೇಖಕರಾಗಿ ರೂಪುಗೊಂಡಿದ್ದ ರಾಗೌ ಅವರ ಮುಂದಿನ ಯಶಸ್ವಿ ಬದುಕಿಗೆ ನಾಂದಿ ಹಾಡಿತು.

ಡಾ.ರಾಗೌ ಅವರದು ಯಶಸ್ವೀ ವಿದ್ಯಾರ್ಥಿ ಜೀವನ. ಆ ಯಶಸ್ವೀ ಜೀವನದ ಹಿಂದೆ ಅವಿರತ ಶ್ರಮವಿದೆ.ಅವರು ತಮ್ಮ ವಿದ್ಯಾರ್ಥಿ ಜೀವನವನ್ನು ಸಾರ್ಥಕವಾಗಿ ಮುಗಿಸುತ್ತಿದ್ದಂತೆಯೇ, ವಿಶ್ವವಿದ್ಯಾನಿಲಯ 1965 ರಲ್ಲಿ ಅವರನ್ನು ಮಹಾರಾಜ ಕಾಲೇಜಿನ ಕನ್ನಡ ಅಧ್ಯಾಪಕರನ್ನಾಗಿ ನೇಮಕ ಮಾಡಿತು.ವಿದ್ಯಾರ್ಥಿ ಲೇಖಕ ರಾಗೌ, ಈಗ ಅಧ್ಯಾಪಕ ಲೇಖಕ ರಾಗೌ ಆದರು. ಹೀಗೆ ನೇಮಕಗೊಂಡ ರಾಗೌ ವಿಶ್ವವಿದ್ಯಾನಿಲಯದ ಸಂಜೆ ಕಾಲೇಜಿಗೆ ವರ್ಗಾವಣೆಗೊಳ್ಳುತ್ತಾರೆ. ಈ ಸಮಯದಲ್ಲಿ ರಾಗೌ ತಮ್ಮ ವಿದ್ವತ್ತನ್ನು ವೃದ್ಧಿಸಿಕೊಳ್ಳುವ ಶ್ರಮಪೂರ್ವಕ ನಿರಂತರ ಅಧ್ಯಯನವನ್ನು ಮುಂದುವರಿಸಿದರು. ವಿಶ್ವವಿದ್ಯಾನಿಲಯ 1968 ರಲ್ಲಿ ಸ್ನಾತಕೊತ್ತರ ತರಗತಿಗಳಿಗೆ ಬೋಧಿಸಲು ಅವರ ಹುದ್ದೆಯನ್ನು ಉನ್ನತೀಕರಿಸಿದ್ದು ಒಂದು ಬೆಳವಣಿಗೆಯಾದರೂ ಅದಕ್ಕಾಗಿ ಅವರು ಆಗ ತಾನೇ ಪ್ರಾರಂಭವಾಗಿದ್ದ ಮಂಗಳೂರಿನ ಸ್ನಾತಕೋತ್ತರ ಕೇಂದ್ರಕ್ಕೆ

ಬೋಧಿಸಲು ಹೋಗಬೇಕಾಯಿತು.ಅಲ್ಲಿನ ವಾತಾವರಣ ಅವರಿಗೆ ಹಿಡಿಸಿದ ಕಾರಣ ಮರಳಿ ರಾಗೌ ಮೈಸೂರಿಗೆ ಬಂದದ್ದಕ್ಕೆ ಸೇವಾ ಬದುಕಿನಲ್ಲಿ ಬಹಳಷ್ಟನ್ನು ಬಿಟ್ಟುಕೊಡಬೇಕಾಯಿತು. ಮಂಗಳೂರಿನಿಂದ ರಾಗೌ ಸಂಜೆ ಕಾಲೇಜಿನ ಅಧ್ಯಾಪಕ ಹುದ್ದೆಗೆ ಮರಳಿ ಬಂದರು,ಮರುವರ್ಷವೇ ಸಂಜೆಕಾಲೇಜಿನಿಂದ 1969 ರಲ್ಲಿ ಮಹಾರಾಜ ಕಾಲೇಜಿಗೆ ವರ್ಗಾವಣೆಗೊಂಡರು. 1970 ರಲ್ಲಿ ಮಾನಸ ಗಂಗೋತ್ರಿಯ ಕನ್ನಡ ಸ್ನಾತಕೋತ್ತರ ಕೇಂದ್ರ ಕನ್ನಡ ಅಧ್ಯಯನ ಸಂಸ್ಥೆಗೆ ನೇಮಕಗೊಂಡರು. ಮೈಸೂರು ವಿ.ವಿ. 1992 ರಲ್ಲಿ ಹೊಸದಾಗಿ ಮಂಡ್ಯದಲ್ಲಿ ಆರಂಭಿಸಿದ ಸ್ನಾತಕೋತ್ತರ ಕೇಂದ್ರಕ್ಕೆ ಅವರನ್ನು ವರ್ಗಾವಣೆ ಮಾಡಿತು. ಮತ್ತೆ ಅವರು ಒಂದು ವರ್ಷದ ನಂತರ ಮತ್ತೇ ಸಂಸ್ಥೆಗೆ ಹಿಂದಿರುಗಿದರು. ರಾಗೌ ಉಪನ್ಯಾಸಕರಾಗಿ ಸೇವೆಗೆ ಸೇರಿ ಅಮೇಲೆ ರೀಡರ್ ಅಗಿ 28 ವರ್ಷಗಳ ನಂತರ ಪದೋನ್ನತಿ ಪಡೆದು ಪ್ರಾಧ್ಯಾಪಕರಾದರು ಎಂಬುದನ್ನು ಬಿಟ್ಟರೆ, ಅವರ ಪರಿಶ್ರಮಪೂರ್ವಕವೂ, ಪ್ರಮಾಣಿಕವೂ ಆದ ದುಡಿಮೆಗೆ ವಿಶ್ವವಿದ್ಯಾನಿಲಯದಿಂದ ಪಡೆದ ಇನ್ನಿತರ ಗೌರವಗಳು, ಸ್ಥಾನಮಾನಗಳು ಏನೇನು ಲಭಿಸಲಿಲ್ಲ. ಇಷ್ಟೆಲ್ಲಾ ಬಿಕ್ಕಟ್ಟುಗಳ ಮಧ್ಯೆಯೂ, ರಾಗೌ ತಮ್ಮ ಸೇವೆಯನ್ನು ವಿಶ್ವವಿದ್ಯಾನಿಲಯದಲ್ಲಿ ಯಾವೊಂದು ಕಳಂಕದ ಲೇಪನವೂ ಇಲ್ಲದೇ ಪೂರೈಸಿದ್ದಾರೆ. ಈ ಗೌರವ ಮನ್ನಣೆ ಅವರಿಗಿದ್ದುದರಿಂದಲೇ 1999 ರಲ್ಲಿ ಪ್ರಾಧ್ಯಾಪಕ ಕ್ಷೇತ್ರದಲ್ಲಿ ಸೆನೆಟ್ ಸದಸ್ಯರಾಗಿ ಅಯ್ಕೆಯಾದರು. ಹಣಕಾಸು ಸಮಿತಿಯ ಸದಸ್ಯರೂ ಅಗಿದ್ದರು. ಇನ್ನು ಹೆಚ್ಚಿನ ಜವಬ್ದಾರಿಯನ್ನು ನಿರ್ವಹಿಸುವ ಉನ್ನತ ಸ್ಥಾನಗಳು ವಿಶ್ವವಿದ್ಯಾನಿಲಯದಲ್ಲಿ ರಾಗೌ ಅವರಿಗೆ ಲಭ್ಯವಾಗಬೇಕಿತ್ತು. ರಾಗೌ ಯಾವತ್ತು ಅಧಿಕಾರಸ್ಥರ, ಪ್ರಭಾವೀ ಜನರ ಮನೆಬಾಗಿಲಿಗೆ ಎಡತಾಕಿದವರಲ್ಲ. ಬರಬೇಕಾದುದಕ್ಕೆ ಅಥವಾ ಬರಲಾಗದುದನ್ನು ದಕ್ಕಿಸಿಕೊಳ್ಳುವುದಕ್ಕೆ ವಾಮ ಮಾರ್ಗಗಳನ್ನು ಹಿಡಿದವರಲ್ಲ. ಆದುದರಿಂದಲೇ ಅಂತಹಯಾವುದೂ ಅವರಿಗೆ ದೊರೆಯಲಿಲ್ಲ. ಆದರೂ ರಾಗೌ ಅವರಿಗೆ 37ವರ್ಷಗಳ ಕಾಲ ತೃಪ್ತಿಕರವಾದ ಸೇವೆಯನ್ನು ಪೂರೈಸಿದ ಧನ್ಯತಾಭಾವವಿದೆ. ವಿಶ್ವವಿದ್ಯಾನಿಲಯದ ಬಗೆಗೆ ಅಧ್ಯಯನ ಸಂಸ್ಥೆಯ ಬಗೆಗೆ ಅಪಾರ ಗೌರವವಿದೆ. ರಾಗೌ ಅವರು ಯಾರೊಬ್ಬರಲ್ಲೂ ಕೆಟ್ಟದ್ದನ್ನು ಕಂಡವರಲ್ಲ, ಯಾರೊಬ್ಬರಿಗೂ ಕೆಟ್ಟದನ್ನು ಬಯಸಿದವರಲ್ಲ. ಎಲ್ಲರನ್ನು ಉದಾರವಾಗಿ ಕಾಣುವ, ಮುಗ್ಧವಾಗಿ ನಂಬುವ ಮಗುವಿನಂತಹ ಮನಸ್ಸು ಅವರದು. ಅವರು ಸಹೋದ್ಯೋಗಿಗಳಿಗೆ ಸನ್ಮಾರ್ಗದರ್ಶಿಯಾಗಿ ವಿದ್ಯಾರ್ಥಿಗಳಿಗೆ ವಿನಯಶೀಲ ವಿದ್ಯಾಗುರುವಾಗಿ, ಸ್ನೇಹಿತರಿಗೆ ಸಂಪನ್ನಜೀವಿಯಾಗಿದ್ದಾರೆ. ರಾಗೌ ಅವರ ವ್ಯಕ್ತಿತ್ವವೆಂದರೆ ಆರಕ್ಕೇರದ ಮೂರಕ್ಕಿಳಿಯದ ಸಮತೂಕದ, ಸಮಭಾವದ, ಸಮನ್ವಯತೆಯ, ಸಮರಸತೆಯ ವ್ಯಕ್ತಿತ್ವ ಅಲ್ಲಿ ಮುಚ್ಚುಮರೆಗಾಗಲಿ, ಒಳಗೊಂದು ಹೊರಗೊಂದು ಎಂಬ ವರ್ತನೆಗಾಗಲೀ ಎಡೆಯಿಲ್ಲ.

ರಾಗೌ ಅವರು ಅಧ್ಯಾಪನದ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಅಚ್ಚು ಮೆಚ್ಚಿನ ಅಧ್ಯಾಪಕರು. ಇದಕ್ಕೆ ಕಾರಣ ಅವರ ವಿದ್ವತ್ತು ,ಪರಿಪಕ್ವ ಪಾಂಡಿತ್ಯ, ಅವರಿಗಿರುವ ಪಠ್ಯದ ಮೇಲಿನ ಪ್ರಭುತ್ವ, ನಿರರ್ಗಳ ನಿರೂಪಣಾ ಸಾಮರ್ಥ್ಯ, ಅವರ ಪ್ರಬುದ್ಧ ಜ್ಞಾನ ಸಂಪತ್ತು, ಅವರ ಪಾಠ ಪ್ರವಚನಗಳ ಸಮ್ಮೋಹನಶಕ್ತಿ ವಿದ್ಯಾರ್ಥಿಗಳನ್ನು ಬೆರಗುಗೊಳಿಸಿದೆ. ಅವರ ಪಾಠವನ್ನು ಕೇಳಿದ ವಿದ್ಯಾರ್ಥಿಗಳು ರೋಮಾಂಚನಗೊಂಡು ಮತ್ತೆ ಮತ್ತೆ ನೆನೆನೆನೆದು ಪುಲಕಿತರಾಗಿರುವ ಅನೇಕ ಮಿತ್ರರನ್ನು ಕಂಡಿದ್ದೇನೆ. ಹೀಗೆ ಶಿಷ್ಯರನ್ನು ನಿರಂತರವಾಗಿ ಜೀವನದುದ್ದಕ್ಕೂ ಉಳಿಸಿಕೊಂಡು ಬಂದವರು ಅಪರೂಪ .ಶಿಷ್ಯರಿಂದ ಬಯಸುವರೇ ಅಧಿಕವಾಗಿರುವವರ ಮಧ್ಯೆ ರಾ.ಗೌ ಶಿಷ್ಯರ ಅಪರಂಜಿ. ಶಿಷ್ಯರನ್ನು ಬೌದ್ಧಿಕವಾಗಿ ಬೆಳೆಸುವ ಕ್ರಿಯೆಯಲ್ಲಿ ರಾಗೌ ತೋರುವ ಕಾಳಜಿ ಅಸಾಧರಣವಾದುದು. ಅವರಿಗೆ ಶಿಷ್ಯ ಪ್ರೀತಿಯಲ್ಲಿ ಕೊಡುವುದು ಮಾತ್ರ ಗೊತ್ತೇ ಹೊರತು, ತೆಗೆದುಕೊಳ್ಳುವ ಕ್ರಿಯೆಯಿಲ್ಲ. ನನ್ನನ್ನು ಒಳಗೊಂಡಂತೆ ಅನೇಕ ಶಿಷ್ಯವೃಂದಕ್ಕೆ ಅದರ ಮೌಲ್ಯ ಗೊತ್ತು ಎಂದರೆ ಅತಿಶ ಯೋಕ್ತಿಯೇನಲ್ಲ. ತಾವೇರುವೆತ್ತರಕ್ಕೆ ತಮ್ಮ ಶಿಷ್ಯರನ್ನೆಲ್ಲ ಏರಿಸಿ ಮೆರಸಬೇಕೆಂಬ ವಾತ್ಸಲ್ಯ ರಾಗೌ ಅವರದು.

ರಾಗೌ ಅರ್ಧ ತೋಳಿನ ಶರ್ಟು ತೊಟ್ಟು, ಎಣ್ಣೆಹಾಕಿ, ನುಣ್ಣಗೆ ಒಂದು ಕೂದಲೂ ಅತ್ತಿತ್ತ ಅಲುಗಾಡದಂತೆ ತಲೆಬಾಚಿ

ಪ್ಯಾಂಟಿನ ಜೇಬಿನೊಳಗೆ ಎಡಗೈ ಇಳಿಬಿಟ್ಟು ಅಧ್ಯಯನ ಸಂಸ್ಥೆಯ ಒಳ ಹೊರಗೆ ತಲೆ ತಗ್ಗಿಸಿ ನಡೆಯುತ್ತಿದ್ದವರು. ರಾಗೌ ಅವರಿಗೆ ಸರಳ ಸಜ್ಜನಿಕೆ ಸ್ವಾಭಾವದಲ್ಲೇ ರಕ್ತಗತವಾಗಿ ಬಂದಿವೆ. ಶುಚಿ ರುಚಿಯಾದ ಜೀವನ ತನ್ನನ್ನು ತಾನು ಮೆರೆಸಿಕೊಳ್ಳದ ಎಲೆಯ ಮರೆಯ ಹಣ್ಣಾಗಿಯೇ ಇರುವ ಹಂಬಲ. ಇದ್ದು ಇಲ್ಲದಂತಿರುವ ಜೀವನ ವಿಧಾನ, ಸಜ್ಜನಿಕೆಯ ಸ್ವಾಭಾವ ಅವರಲ್ಲಿರುವ ವಿಶಿಷ್ಟಗುಣಗಳು. ದುಡಿಮೆಗೆ ಮತ್ತೊಂದು ಪ್ರತಿಮೆ ರಾಗೌ. ಅವರ ಅಂತ.ಸತ್ವ ಗಟ್ಟಿಯಾಗಿರುವುದೇ ಅವರ ದುಡಿಮೆಯಿಂದ ಎಂದರೆ ತಪ್ಪಾಗಲಾರದು. ಅದು ಯಾವುದೇ ಕೆಲಸವಾಗಲಿ ಒಪ್ಪಿಕೊಂಡ ಮೇಲೆ ಅಚ್ಚುಕಟ್ಟಾಗಿ ಮಾಡಬೇಕು ಹೇಗೋ ಮಾಡಿದರಾಯಿತು ಎಂಬ ಉಡಾಫೆ ಅವರಿಗೆ ರುಚಿಸುವುದಿಲ್ಲ. ರಾಗೌ ಅವರು ಕೀರ್ತಿಯನ್ನು ಮರೆತು ಮೌಲ್ಯವನ್ನು ಅಪ್ಪಿಕೊಂಡವರು. ಎಂದು ಪ್ರಚಾರಕ್ಕೆ, ಪ್ರಶಂಸೆಗೆ ಇಚ್ಚೆಪಟ್ಟವರಲ್ಲ. ಎಲೆ ಮರೆಯ ಹೂವಿನಂತೆ, ಎಲೆ ಮರೆಯ ಕಾಯಿಯಂತೆ ಕಾಣಿಸಿಕೊಳ್ಳುವುದೇ ಅವರಿಗೆ ಸಂತೋಷ ರಾಗೌ ಅವರು ತಮ್ಮ ಬೋಧನಾ ಸಾಮರ್ಥ್ಯ ಅದರೊಡನೆ ಮೆಳೈಸಿರುವ ಲೇಖನ ಸಾಮರ್ಥ್ಯ, ವಿನಯ ಸಂಪನ್ನತೆ, ಮಿತಿ ಮಾತುಗಾರಿಕೆ, ಅಂತರ್ಮುಖತೆ, ಮಾನವೀಯ ಅಂತ,ಕರಣ, ಎಲ್ಲಕ್ಕಿಂತ ಹೆಚ್ಚಾಗಿ ಅಜಾತ ಶತೃತ್ವ - ಇವೇ ಮೊದಲಾದ ಸದ್ಗುಣಗಳಿಂದ ನಿಜವಾದ ಅರ್ಥದಲ್ಲಿ ಗುರುವಾಗಿ ಸದಾಕಾಲ ತಮ್ಮ ವೃತ್ತಿಯಲ್ಲಿ ತಲ್ಲೀನರಾದ ನಿಷ್ಕಾಮ ಯೋಗಿಯಾಗಿದ್ದಾರೆ.

ರಾಗೌ ಅವರ ವ್ಯಕ್ತಿತ್ವವನ್ನು ಕುರಿತು ಡಾ.ಎಂ.ಚಿದಾನಂದ ಮೂರ್ತಿಯವರು 'ಶ್ರೀ ರಾಗೌ ಒಬ್ಬ ನಿಷ್ಕಲ್ಮಷ ಹೃದಯದ ಸದಾ ಅಧ್ಯಯನಶೀಲ ಮಿತಭಾಷಿ, ಸುಸಂಸ್ಕೃತ ವ್ಯಕ್ತಿಯೆಂಬ ಅನುಭವ ನನಗಾಗಿದೆ. ಹಲವರಲ್ಲದ ವಿರಳ ವ್ಯಕ್ತಿಗಳಲ್ಲಿ ಒಬ್ಬರು 'ರಾಗೌ' ಎಂದು ಹೇಳಬಯಸುತ್ತೇನೆ ಎಂಬ ಮಾತುಗಳನ್ನಾಡಿದ್ದಾರೆ.

ಡಾ.ಎಂ.ಎಂ. ಕಲಬುರ್ಗಿಯವರು ರಾಗೌ ವ್ಯಕ್ತಿತ್ವ ಕುರಿತು ಹೀಗೆ ಹೇಳುತ್ತಾರೆ; 'ರಾಗೌ ಅವರ 'ಹದ'ವಾದ ವ್ಯಕ್ತಿ ಬದುಕನ್ನು, ಈ ಹದದ ರೀತಿ ವಜ್ರಾದಪಿ ಕಠಿಣ,ಮೃದೂನಿ ಕುಸುಮಾದಪಿ. ಕಠಿಣವೆಂದರೆ ಕಠಿಣ, ಮೃದುವೆಂದರೆ ಮೃದು. ಈ ಎರಡೂ ಅವರಲ್ಲಿ ಲೋಹಗಳು ಅವರಲ್ಲಿ ಕೃತಕವಾಗಿಯಲ್ಲ, ನೈಸರ್ಗಿಕವಾಗಿವೆ. ಆದುದರಿಂದ ಅವರನ್ನು ನೋಡಿದಾಗಲೆಲ್ಲಾ ನನಗೆ ನೆನಪಿಗೆ ಬರುವುದು ವಜ್ರಕುಸುಮ.

ರಾಗೌ ಅವರಿಗೆ ಅರವತ್ತು ವರ್ಷ ತುಂಬಿದ ಸಂದರ್ಭವನ್ನು ಬರೆಹದ ಸಾಧನೆಯನ್ನು ಮನಗಂಡು ಅದೇ ಅಭಿಮಾನಿಗಳೂ ಮಿತ್ರರೂ ಸೇರಿ ೨೦೦೫ರಲ್ಲಿ 'ಅಭಿಜಾತ' ಎಂಬ ಹೆಸರಿನ ಅಭಿನಂದನಾ ಗ್ರಂಥವನ್ನು ಸಮರ್ಪಿಸಿದ್ದಾರೆ.ರಾಗೌ ಅವರ ಬದುಕು- ಬರೆಹವನ್ನು ಕುರಿತಂತೆ ಶಿಷ್ಯರು ಮತ್ತು ಗೆಳೆಯರು ಕೆಲವು ಕೃತಿಗಳನ್ನು ಬರೆದಿರುವುದು ಶ್ಲಾಘನೀಯ. ಅವುಗಳಲ್ಲಿ ಮುಖ್ಯವಾದವುಗಳು 'ಡಾ,ರಾಗೌ.ವ್ಯಕ್ತಿ-ಅಭಿವ್ಯಕ್ತಿ' ಎಂಬ ಕೃತಿಯನ್ನು ಡಾ.ಬೋರೇಗೌಡ ಚಿಕ್ಕಮರಳಿ ೨೦೦೮ರಲ್ಲಿ 'ರಾಗೌ ಕಾವ್ಯವಿಮರ್ಶೆ' -ಸಂ.ಡಾ.ಬೆಳ್ಳೂರು ವೆಂಕಟಪ್ಪ ೨೦೦೮ರಲ್ಲಿ, ಡಾರಾಗೌ,ವ್ಯಕ್ತಿ-ಸಾಹಿತ್ಯ ,ಸಂ. ಡಾ.ಬೋರೇಗೌಡ ಚಿಕ್ಕಮರಳಿ, ಡಾ.ಮ ರಾಮಕೃಷ್ಣ ೨೦೧೨ರಲ್ಲಿ ಹಾಗೂ 'A Profle of Ragow the writer' -by pro.chandrashekaraiah 2012 ರಲ್ಲಿ ಪ್ರಕಟಿಸಿದ್ದಾರೆ.

ರಾಗೌ ಅವರು ಸೃಜನಶೀಲ ಹಾಗೂ ಸೃಜನೇತರ ಪ್ರಕಾರಗಳಲ್ಲಿ ಇಷ್ಟೊಂದು ಕೆಲಸ ಮಾಡಿದ್ದರೂ, ಸಾಹಿತ್ಯವಲಯದಲ್ಲಿ ಗುರುತಿಸಿಕೊಂಡ ಅನೇಕರು ಇಂದಿಗೂ ಇವರನ್ನು ಗುರುತಿಸುವುದು ಒಬ್ಬ ಜಾನಪದ ವಿದ್ವಾಂಸರಾಗಿ ವಾಸ್ತವವಾಗಿ ಇದೊಂದು ವಿಪರ್ಯಾಸದ ಸಂಗತಿ. ಕನ್ನಡ ಜಾನಪದ ಕ್ಷೇತ್ರದಲ್ಲಿ ಮಹತ್ವದ ಕೆಲಸ ಮಾಡಿದ್ದಾರೆ,ಜನಪ್ರಿಯರಾಗಿದ್ದಾರೆ. ಇದರಲ್ಲಿ ಎರಡು ಮಾತಿಲ್ಲ. ಹಾಗೆಯೇ ವಿದ್ವತ್ತಿನ ಇತರೇ ಕ್ಷೇತ್ರಗಳಲ್ಲೂ ಸೃಜನಶೀಲ ಪ್ರಕಾರಗಳಲ್ಲಿ ಮುಖ್ಯವಾದದ್ದೆನಿಸಿದೆ. ಕಾವ್ಯ ಹಾಗೂ ನಾಟಕ ಕ್ಷೇತ್ರದಲ್ಲೂ ಮಹತ್ವದ ಕೆಲಸ ಮಾಡಿದ್ದಾರೆ, ರಾಗೌ ಹಾಗೆ ಮಾಡುತ್ತಿದ್ದಾರೆ ಸಹ.

ರಾಗೌ ಅವರು ಈವರೆಗೆ ಪ್ರಕಟಿಸಿರುವ ಪ್ರಕಾರವಹಿ ಕೃತಿಗಳ ಸಂಖ್ಯೆ ಹೀಗಿವೆ. ಕಾವ್ಯ-ಹದಿನೈದು. ನಾಟಕ-ಒಂದು, ವಿಮರ್ಶೆ-ಹದಿನಾರು ಸಂಶೋಧನಾಮಹಾಪ್ರಬಂಧ-ಒಂದು ಗ್ರಂಥಸಂಪಾದನೆ-ಐದು, ಜಾನಪದ-ಹದಿನಾಲ್ಕು,

ಸಂಕೀರ್ಣ-ಒಂದು, ಮಕ್ಕಳಸಾಹಿತ್ಯ- ಮೂರು, ಸಂಪಾದನಾ ಕೃತಿಗಳು-ಇಪ್ಪತ್ತು.

ಡಾ.ರಾಗೌ ಅವರ ನಡೆ, ನುಡಿ ಆಲೋಚನೆ ಅಭಿವ್ಯಕ್ತಿಗಳಲ್ಲಿ ಸ್ವಂತಿಕೆ ಇದೆ, ಮಹದಾಸೆಯಿದೆ ಮಾನವೀಯತೆಯಿದೆ. ಮೂಲಭೂತ ಗುಣಗಳನ್ನು ಉಳಿಸಿಕೊಂಡು ಅನುಭವ ಮೂಲದ ಹಿತವನ್ನು ಹೇಳುವ ಇಚ್ಛೆ ಅವರ ಕಾವ್ಯಕ್ಕಿದೆ. ನವೋದಯದ ಲಯಾತ್ಮಕತೆ, ನವ್ಯದ ಚಿಂತನೆ, ಬಂಡಾಯದ ಮಂಥನ ಆಧುನಿಕೋತ್ತರದ ಸ್ವಚ್ಛಂದ ಅಭಿವ್ಯಕ್ತಿ ಇವೆಲ್ಲವೂಗಳ ಸಮ್ಮಿಲನ ರಾಗೌ ಅವರ ಕಾವ್ಯ. ರಾಗೌ ಅವರ ಕಾವ್ಯಯಾತ್ರೆ ವಿಸ್ತಾರವಾದದ್ದು. 'ಯಾತ್ರೆ'ಯಿಂದ ಹಿಡಿದು ೨೦೧೯ರಲ್ಲಿ ಪ್ರಕಟವಾದ 'ಕಾಲಾತೀತ' ದವರೆಗೆ ಒಟ್ಟು ಹದಿನೈದು ಸಂಕಲನಗಳು ಬಂದಿದ್ದು, ಇನ್ನು ೪೦೦ಕ್ಕೂ ಹೆಚ್ಚು ಕವನಗಳನ್ನು ಬರೆದಿಟ್ಟುಕೊಂಡಿರುವ ರಾಗೌ ಅವುಗಳನ್ನು ಪ್ರಕಟಿಸುವ ಸಿದ್ಧತೆಯಲ್ಲಿದ್ದಾರೆ.

ರಾಗೌ ಕಾವ್ಯಾಧ್ಯಾನಿ. ಅವರ ಕಾವ್ಯದಂತೆಯೇ ಅವರ ಬದುಕು ಕೂಡ ಪ್ರಾಮಾಣಿಕವಾದುದು.ಬದುಕು ಕಾವ್ಯಕ್ಕಿಂತ ದೊಡ್ಡದು ಎಂಬ ಮಾತಿದೆ. ಆ ಮಾತನ್ನು ರಾಗೌ ಅವರಂಥವರನ್ನು ನೋಡಿಯೇ ಆಡಿರಬೇಕು. ಅವರ ಮುಗ್ಧತೆ, ಪ್ರೀತಿ, ವಿಶ್ವಾಸ, ತನ್ನೊಳಗೇ ನೋಯುವ ಗುಣ. ದಕ್ಕಿದ್ದಷ್ಟನ್ನೇ ಪ್ರೀತಿಯಿಂದ ಸ್ವೀಕರಿಸುವ ಮನೋಧರ್ಮ- ಇವೆಲ್ಲ ಅವರ ಕಾವ್ಯಕ್ಕಿಂತ ಖಂಡಿತ ದೊಡ್ಡವು. ಇಂಥ ದೊಡ್ಡ ವ್ಯಕ್ತಿತ್ವದ ರಾಗೌ ಅವರ ಕಾವ್ಯ ಓದುಗರನ್ನು ಚಿಂತನೆಗೆ ತೊಡಗಿಸುತ್ತದೆ.

ಕವಿತೆ ರಾಗೌ ಒಲಿದ ಪ್ರಥಮ ಅದ್ಯತೆಯ ಕ್ಷೇತ್ರ. ಕಾವ್ಯಕ್ಷೇತ್ರಕ್ಕೆ ರಾಗೌ ಅವರ ಕೊಡುಗೆ ವಿಪುಲವಾದುದು. ವಿದ್ಯಾರ್ಥಿಯಾಗಿದ್ದಾಗಲೇ ಬರೆದ ಅನೇಕ ಕವಿತೆಗಳನ್ನು ಸಂಗ್ರಹಿಸಿ 1966 ರಲ್ಲಿ ರಾಗೌ 'ಯಾತ್ರೆ' ಎಂಬ ಹೆಸರಿನಲ್ಲಿ ಮೊದಲ ಕವನ ಸಂಕಲನವನ್ನು ಪ್ರಕಟಿಸಿದ್ದಾರೆ.ಅವರ ಕವನ ಸಂಕಲನಗಳು ಅನುಕ್ರಮವಾಗಿ "ತೆಪ್ಪ"-1972, ಮೋಡ ಮುಸುಕಿದ ಆಕಾಶ-1996 ನೆಲದ ಮರೆಯ ನಿಧಾನ - 1999. ಮಾತುಮೌನಗಳ ನಡುವೆ- ೨೦೦೦, ಆರದಿರಲಿ ಈ ಬೆಳಕು-೨೦೦೨, ಮಾತು ಮಾರ್ಗ ನಿನ್ನೆ ನಾಳೆಗಳ ನಡುವೆ (ಸಮಗ್ರ)-೨೦೦೨,ಅನೀಲ ಆರಾಧನಾ(ಸಂಯುಕ್ತ ಕಾವ್ಯ) -೨೦೦೨, ಅನಾಗತ ೨೦೦೭,ಸಮಗ್ರ ಕಾವ್ಯ೨೦೧೨ ಕೋಗಿಲೆಗೊಂದು ಕೋರಿಕೆ-೨೦೧೩ ನೀರತಾವರೆ -೨೦೧೩ ದಾರಿಸಾಗಿದೆ-೨೦೧೨, ಕಾಲಾತೀತ ೨೦೧೯-ಹೀಗೆ ರಾಗೌ ಒಟ್ಟು ಹದಿನೈದು ಕವನ ಸಂಕಲನಗಳನ್ನು ಹೊರ ತಂದಿದ್ದಾರೆ. ಇವರು ರಚಿಸಿರುವ ಕವನಗಳ ಸಂಖ್ಯೆ ಹೇಗೆ ವಿಪುಲವಾಗಿವೆಯೋ ಹಾಗೆಯೇ ಮೌಲ್ಯದ ದೃಷ್ಟಿಯಿಂದ ಮಹತ್ವದ್ದೆನಿಸಿವೆ. ಬಹಳ ಕಷ್ಟದಿಂದ ಬೆಳೆದು ಬಂದ ರಾಗೌ ಅವರು ಆ ಕಷ್ಟದ ಅಥವಾ ಬದುಕಿನ ಏರಿಳಿತದ ಎಲ್ಲ ಚಿಂತನೆಗಳನ್ನು ತಮ್ಮ ಬರವಣಿಗೆಯಲ್ಲಿ ಅಡಕ ಮಾಡಿದ್ದಾರೆ. ಅವರು ಬರೆದಿರುವ ಪ್ರತಿಯೊಂದು ಸಾಲಿನಲ್ಲಿಯೂ ನೋವಿನ ಸಾಂದ್ರತೆ ಉದ್ದಕ್ಕೂ ಮಿಡಿಯುತ್ತವೆ.

ರಾಗೌರವರನ್ನು ಕುರಿತು ಅವರ ಗುರುಗಳಾದ ಪ್ರೊ. ಸುಜನಾ ಅವರು ಆಡಿರುವ ಪ್ರೀತಿಯ ಹಾಗೂ ಆತ್ಮೀಯ ಮಾತುಗಳು ಹೀಗಿವೆ. 'ರಾಗೌ ಬೀಸುವ ಕಲ್ಲಿನಲ್ಲಿ ಗೋಧಿಯೋ, ರಾಗಿಯೋ, ಅಕ್ಕಿಯೋ, ಎಲ್ಲವೂ ಪುಡಿಯಾಗಿ ಬಿಡುತ್ತವೆ. ಆದರೆ ಗೂಟಕ್ಕೆ ಅಂಟಿಕೊಂಡ ಕೆಲವು ಕಾಳುಗಳು ಭಗವಂತನಿಗೆ ಅಂಟಿಕೊಂಡ ಜೀವ ಇದ್ದಂತೆ. ಅವು ಮಾತ್ರ ಪುಡಿಯಾಗುವುದಿಲ್ಲ. ರಾಗೌ ಆವರನ್ನು ನೋಡಿದಾಗಲೆಲ್ಲಾ ನನಗೆ, ಬೀಸುವ ಕಲ್ಲಿನ ಗೂಟಕ್ಕೆ ಅಂಟಿದ ಕಾಳುಗಳ ನೆನಪು ಬರುತ್ತದೆ'.

ರಾಗೌ ವ್ಯಕ್ತಿತ್ವ ಹಾಗೂ ಸಾಹಿತ್ಯವನ್ನು ಕುರಿತು ಡಾ.ಹಂಪನಾ ಅವರು 'ರಾಗೌ ನಮ್ಮ ನಡುವೆ ಒಬ್ಬ ಸಜ್ಜನ, ಒಬ್ಬ ವಿದ್ವಾಂಸ, ಒಬ್ಬ ಶ್ರೇಷ್ಠ ಸಂಶೋಧಕ, ಒಬ್ಬ ಮಾನವ ಪ್ರೇಮಿ, ಒಬ್ಬ ಭಾವಜೀವಿ ಎಂದು ಹೇಳಿದ್ದಾರೆ.

ರಾಗೌ ಅವರ ಕಾವ್ಯಗಳನ್ನು ಕುರಿತು ಪ್ರೊ.ಆರ್ವಿಯಸ್ ಸುಂದರಂರವರು ಹೀಗೆ ಹೇಳುತ್ತಾರೆ. 'ನವೋದಯದ ಲಯಾತ್ಮಕತೆ, ನವ್ಯದ ಚಿಂತನೆ. ಬಂಡಾಯದ ಮಂಥನ ಆಧುನಿಕೋತ್ತರದ ಸ್ವಚ್ಛಂದ ಅಭಿವ್ಯಕ್ತಿ ಇವೆಲ್ಲವುಗಳ ಸಮ್ಮಿಲನ ರಾ ಗೌ ಅವರ ಕಾವ್ಯ' ಎಂದು ಹೇಳುತ್ತಾರೆ.

ಡಾ.ಸಿ.ನಾಗಣ್ಣನವರು ರಾಗೌ ಅವರ ಕಾವ್ಯಗಳನ್ನು ಕುರಿತು ನಿಸ್ಸಂದೇಹವಾಗಿ 'ಕನ್ನಡ ಕಾವ್ಯ ವಲಯದಲ್ಲಿ ರಾಗೌ ಒಂದು ಮೇಜರ್ ದನಿ' ಎಂದು ಅಭಿಪ್ರಾಯ ಪಡುತ್ತಾರೆ.

ಪ್ರೊ.ನೀಲಗಿರಿ ತಳವಾರರವರು 'ರಾಗೌ ಕಾವ್ಯ ಸತ್ವದಲ್ಲಿ, ಸಮೃದ್ಧಿಯಲ್ಲಿ, ಗಂಭೀರತೆಯಲ್ಲಿ ಗಮನ ಸೆಳೆಯುವಂತೆ ತನ್ನ ವಿರಳ ಸ್ವರೂಪದ ಆಶಯ ಧ್ಯೇಯದ ಹಿನ್ನೆಲೆಯಲ್ಲೂ ಗಮನ ಸೆಳೆಯುತ್ತದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಉತ್ತಮ ಕವಿಯಾಗಿರುವ ರಾಗೌ ಪ್ರಸಿದ್ಧ ಸಾಹಿತ್ಯ ವಿಮರ್ಶಕರೂ ಆಗಿದ್ದಾರೆ. ಹದಿನಾರು ಸಾಹಿತ್ಯ ವಿಮರ್ಶಾ ಕೃತಿಗಳನ್ನು ಬರೆದಿರುವ ಇವರ ವಿಮರ್ಶೆಯ ಹರಹು ದೊಡ್ಡದು. ಇಲ್ಲಿನ ವಿಮರ್ಶಾ ಕೃತಿಗಳಲ್ಲೆಲ್ಲಾ ಪ್ರಾಯೋಗಿಕ ಹಾಗೂ ತಾತ್ವಿ ಕ ಎರಡೂ ನಿಟ್ಟುಗಳಲ್ಲಿ ಅವರ ಚಿಂತನ-ಮಂಥನ ನಡೆದಿವೆ. ಸಾಹಿತ್ಯ ಮೌಲ್ಯಗಳಂತೆ ಜೀವನ ಮೌಲ್ಯಗಳೂ ಅಲ್ಲಿ ಸ್ಥಾನ ಪಡೆದುಕೊಂಡಿದ್ದು, ಇದರಿಂದ ಇವರ ವಿಮರ್ಶೆಗೆ ಸಮಗ್ರತೆ ಲಭ್ಯವಾಗಿದೆ. 'ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳು' ೧೯೬೨ ರಲ್ಲಿ ರಾಗೌ ರಚಿಸಿದ ಮಹತ್ವದ ಕೃತಿಗಳಲ್ಲಿ ಒಂದು.

ಇದು ಸಂಶೋಧನಾ ಕೃತಿಗಳಲ್ಲಿ ಶಿಖರಪ್ರಾಯವಾದದ್ದು. ಪಿಎಚ್.ಡಿ ಪದವಿಗಾಗಿ ಸಂಶೋಧನೆಯನ್ನು ಕೈಗೊಂಡು ಹದಿನೈದು ವರ್ಷಗಳ ಧೀರ್ಘಕಾಲ ಶ್ರಮಪಟ್ಟಿದ್ದರ ಫಲವಾಗಿ ರಚಿತವಾದ ಮಹಾಪ್ರಬಂಧ ಇದಾಗಿದೆ.

ಡಾ.ರಾಗೌ ಒಟ್ಟು ಸಾಹಿತ್ಯ ಹಾಗೂ ಪಿಎಚ್.ಡಿ ಮಹಾಪ್ರಬಂಧವನ್ನು ಕುರಿತು ಅವರ ಗುರುಗಳಾದ ಡಾ.ಹಾ.ಮಾ.ನಾಯಕ್‌ರವರು ' ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳು' ಎಂಬುದು ಒಂದು ಅಳವಾದ ಅಧ್ಯಯನದ, ಅಪರೂಪ ಶೋಧನೆಯ ಪ್ರಬಂಧವಾಗಿದೆ. ಈ ವಿಶಿಷ್ಟ ಪ್ರಬಂಧದಲ್ಲಿ ಕಲೆಹಾಕಿರುವ ಮಾಹಿತಿ ವಿಪುಲವಾಗಿವೆ. ಈ ಪ್ರಬಂಧದಲ್ಲಿ,ಕನ್ನಡ ಕಾವ್ಯಗಳಲ್ಲಿ ವ್ಯಕ್ತವಾಗಿರುವ ಐತಿಹಾಸಿಕ ಸಂಗತಿಗಳ ಒಂದು ಸಮಗ್ರ ನಿರೂಪಣೆಯಿದೆ. ಈವರೆಗೆ ಯಾರೂ ಇಷ್ಟು ವ್ಯಾಪಕವಾಗಿ ಈ ಅಧ್ಯಯನವನ್ನು ಕೈಗೊಂಡಿರಲಿಲ್ಲ. ಶ್ರೀರಾಮೇಗೌಡರು ಪ್ರಸಿದ್ಧ ಲೇಖಕರೆಂದೂ, ಜಾನಪದ ತಜ್ಞರೆಂದೂ ಹೆಸರಾಗಿದ್ದಾರೆ. ಇದರಿಂದ ಅವರ ಬರವಣಿಗೆಗೆ ಒಂದು ಸೊಗಸು ಸಾಧ್ಯವಾಗಿದೆ. ಅವರು ಐತಿಹ್ಯಕ್ಕೂ, ಇತಿಹಾಸಕ್ಕೂ ಇರುವ ವ್ಯತ್ಯಾಸವನ್ನು ಬಲ್ಲವರಾಗಿರುವುದರಿಂದ, ಕನ್ನಡ ಕಾವ್ಯಗಳಲ್ಲಿ ಹುದುಗಿರುವ ಕರ್ನಾಟಕದ ಚರಿತ್ರೆಯನ್ನು ಹೆಕ್ಕಿ ತೋರಿಸುವ ಕೆಲಸದಲ್ಲಿ ಸಫಲರಾಗಿದ್ದಾರೆ. ಇದು ಇತಿಹಾಸವನ್ನು ಕುರಿತ ಬರವಣಿಗೆಯಾದರೂ ನಿರೂಪಣೆ, ವಿಶ್ಲೇಷಣೆ, ವಿವರಣೆಗಳಲ್ಲಿ ಸಾಹಿತ್ಯದ ಸೊಗಡನ್ನು ತುಂಬಿಕೊಂಡಿದೆ. ಆದ್ದರಿಂದ ಈ ಪ್ರಬಂಧದ ಓದು ಜಡ ಎನ್ನಿಸುವುದಿಲ್ಲ. ಈ ದೃಷ್ಟಿಯಿಂದಲೂ ಈ ಪ್ರಬಂಧ ಮಹತ್ವದ್ದಾಗಿದೆ. ಈಚೆಗೆ ನಾನು ಓದಿದ ಪ್ರಬಂಧಗಳಲೆಲ್ಲಾ ಇದು ಬಹಳ ಮುಖ್ಯವಾದದ್ದು ಎಂದು ಹೇಳಬೇಕು. ವಿಶ್ಲೇಷಣೆ, ನಿರೂಪಣೆ ಇವುಗಳ ಆಳ ಮೊನಚು ಮತ್ತು ಸೊಗಸುಗಳಿಂದ ಈ ಪ್ರಬಂಧವು ಕನ್ನಡ ಸಾಹಿತ್ಯಕ್ಕೆ ಒಂದು ಕೊಡುಗೆಯೆಂದು ನಾನು ಭಾವಿಸುತ್ತೇನೆ'. ಎಂಬ ಮೆಚ್ಚುಗೆಯ ನುಡಿಗಳನ್ನಾಡಿದ್ದಾರೆ. ಇನ್ನು 'ದೊರೆ ದುರ್ಯೋಧನ ' ರಾಗೌ ರಚಿಸಿದ ಕಾವ್ಯ ನಾಟಕ. ಇದು ಸೃಜನ ಶೀಲ ಪ್ರಕಾರಕ್ಕೆ ಸೇರಿದ ಕೃತಿಯಾಗಿದೆ.

ಜಾನಪದ ಕ್ಷೇತ್ರಕ್ಕೇ ರಾಗೌ ಅವರ ಕೊಡುಗೆ ಅದ್ವೀಯವಾದುದು. ನಮ್ಮ ಗಾದೆಗಳು, ನಮ್ಮ ಒಗಟುಗಳು, ಜನಪದ ಸಾಹಿತ್ಯ ರೂಪಗಳು, ಜಾನಪದ ರಾಮಾಯಣ, ಜನಪದ ನಂಬಿಕೆಗಳು, ಕನ್ನಡ ಶಿಶುಪ್ರಾಸಗಳು, ಚಾಮಾಯಿ, ಜಾನಪದ ಸಂಶೋಧನೆ, ಜಾನಪದತತ್ವಾರ್ಥಪ್ರವೇಶ -ಇವೇ ಮೊದಲಾದ ಹದಿನಾಲ್ಕು ಕೃತಿಗಳಲ್ಲಿ ರಾಗೌ ಜಾನಪದವನ್ನು ಸೈದ್ಧಾಂತಿಕ, ತಾತ್ವಿಕ ಹಾಗೂ ವಿಮರ್ಶಾತ್ಮಕ ನೆಲೆಗಳಲ್ಲಿ ವಿವೇಚಿಸುವ ವಿಶ್ಲೇಷಿಸುವ ಕಾರ್ಯವನ್ನು ಮಾಡಿದ್ದಾರೆ. ಗ್ರಂಥ ಸಂಪಾದನಾ ಕ್ಷೇತ್ರದಲ್ಲೂ ರಾಗೌ ಅವರ ಕೊಡುಗೆಯಿದ್ದು ಸಾಹಸಭೀಮವಿಜಯ ೧೯೮೫, ಅಜಿತ ತೀರ್ಥಂಕರ ಪುರಾಣ ೧೯೮೮, ಲಕ್ಷ್ಮೀಶನ ಜೈಮಿನಿಭಾರತಕ್ಕೆ ೧೯೯೩ರಲ್ಲಿ, ಸರ್ವಜ್ಞನವಚನಗಳು ೨೦೦೩, ಪಂಪಕವಿಯ ಆದಿಪುರಾಣ ೨೦೧೯-ಇವು ಗಮನಾರ್ಹ ಗ್ರಂಥ ಸಂಪಾದನಾ ಕೃತಿಗಳಾಗಿವೆ .ಅಷ್ಟೇ ಅಲ್ಲದೆ ಮಕ್ಕಳ ಸಾಹಿತ್ಯದ ಮೂರು ಕೃತಿಗಳು ಪ್ರಕಟವಾಗಿವೆ. ೨೦೦೫ ರಲ್ಲಿ ಪ್ರಕಟವಾದ 'ಷಷ್ಟಿ ಸಂಪದ' ಅವರ ಇನ್ನೊಂದು ವಿಶಿಷ್ಟ ಗ್ರಂಥ. ಸಾಹಿತ್ಯದ ವಿವಿಧ ಪ್ರಕಾರಕ್ಕೆ ಸಂಬಂಧಿಸಿದಂತೆ ಸುಮಾರು ೨೦ ಕೃತಿಗಳನ್ನು ಸಂಪಾದಿಸಿದ್ದಾರೆ.

ರಾಗೌ ಅವರ ಸುಧೀರ್ಘ ಕಾಲದ ಸಾರ್ಥಕ ಸೇವೆಗೆ ಹಾಗೂ

ಅವರ ಸಾಹಿತ್ಯ ಭಂಡಾರದಲ್ಲಿದ್ದ ಕೆಲವು ಪುಸ್ತಕಗಳಿಗೆ ಶಸ್ತಿ ಮತ್ತು ಬಹುಮಾನಗಳೂ ಲಭಿಸಿವೆ. ನಮ್ಮ ಒಗಟುಗಳು ಕೃತಿಗೆ ೧೯೭೦ರಲ್ಲಿ, ಜಾನಪದ ಸಂಕೀರ್ಣ ೧೯೭೦ರಲ್ಲಿ. ರನ್ನ ವಿರಚಿತ ಸಾಹಸಭೀಮವಿಜಯ-೧೯೯೫ 'ಅಜಿತ ತೀರ್ಥಂಕರ ಪುರಾಣ'೧೯೮೮ ಹಾಗೂ ಲಕ್ಷ್ಮೀಶನ ಜೈಮಿನಿಭಾರತಕ್ಕೆ ೧೯೯೩ರಲ್ಲಿ -ಈ ಕೃತಿಗಳಿಗೆ ರಾಜ್ಯ ಸಾಹಿತ್ಯ ಆಕಾಡೆಮಿ ಬಹುಮಾನಗಳು ಲಭಿಸಿವೆ. ಕುವೆಂಪು ಸಾಹಿತ್ಯವಿಮರ್ಶೆ ಕೃತಿಗೆ ೧೯೭೮ರಲ್ಲಿ ವಿದ್ಯಾವರ್ಧಕ ಟ್ರಸ್ಟ್ ಬಹುಮಾನ ದೊರೆತಿದೆ. ೧೯೯೫ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಆಕಾಡೆಮಿ ರಾಗೌ ಅವರಿಗೆ 'ಜಾನಪದ ತಜ್ಞ' ಎಂಬ ಪ್ರಶಸ್ತಿ ನೀಡಿ ಗೌರವಿಸಿದೆ. ೧೯೯೫ರಲ್ಲಿ ಜನವರಿ ೨೮ ಮತ್ತು ೨೯ರಂದು ನಡೆದ ನಾಲ್ಕನೆಯ ಮಂಡ್ಯ ಜಿಲ್ಲಾ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆಯನ್ನು ವಹಿಸಿದ್ದಾರೆ. ೨೦೦೦ರಲ್ಲಿ ಕರ್ನಾಟಕ ರಾಜ್ಯ ಸಾಹಿತ್ಯ ಆಕಾಡೆಮಿ ಗೌರವ ಪ್ರಶಸ್ತಿ ದೊರೆತರೆ, ೨೦೦೨ರಲ್ಲಿ ಪ್ರಜಾರತ್ನ ಪ್ರಶಸ್ತಿ ಲಭಿಸಿದೆ. ಅಲ್ಲದೆ ಡಾ.ಜೀ.ಶಂಪ ಜಾನಪದ ತಜ್ಞ ಪ್ರಶಸ್ತಿ, ೨೦೦೫ರಲ್ಲಿ ಜನದನಿ ಪ್ರಕಾಶನ ಪ್ರಶಸಿ ನೀಡಿ ಗೌರವಿಸಿದೆ. ೨೦೦೮ರಲ್ಲಿ 'ಅನಾಗತ' ಕೃತಿಗೆ ಎಚ್‌ಡಿ ಚೌಡಯ್ಯ ಕಾವ್ಯ ಪ್ರಶಸ್ತಿ ಲಭಿಸಿದೆ. ಇನ್ನು ಇವರ 'ಪ್ರಾಚೀನ ಕಾವ್ಯ ಚಿಂತನ' ಕೃತಿಗೆ ೨೦೦೮ರಲ್ಲಿ, ಮೈಸೂರು ದಕ್ಷಿಣ ವಲಯ ಲಯನ್ಸ್ ಸಂಸ್ಥೆಯಿಂದ 'ದಕ್ಷಿಣ ಕೇಸರಿ ಪ್ರಶಸ್ತಿ' ಲಭಿಸಿದೆ.೨೦೦೯ರಲ್ಲಿ ಕಾರಾವಾರದಲ್ಲಿ ನಡೆದ ಕರ್ನಾಟಕ ವಿಶ್ವವಿದ್ಯಾನಿಲಯದ ೩೫ನೇ ಅಖಿಲ ಕರ್ನಾಟಕ ಜಾನಪದ ಸಮ್ಮೇಳನದ ಸರ್ವಾಧ್ಯಕ್ಷತೆಯ ಗೌರವವೂ ದೊರೆತಿದೆ. ೨೦೧೧ರಲ್ಲಿ ಕರ್ನಾಟಕ ಸರ್ಕಾರದ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಹಾಗೂ ೨೦೨೦ರಲ್ಲಿ ಕರ್ನಾಟಕ ಜಾನಪದ ಪರಿಷತ್ತು 'ಜಿ.ನಾರಾಯಣ ಜಾನಪದಲೋಕ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದೆ.

ಒಂದು ರೀತಿಯ ಸಂಕೋಚದ ವ್ಯಕ್ತಿತ್ವದ ರಾಗೌ ಯಾರು ತಮ್ಮನ್ನು ಗುರುತಿಸಲಿ, ಬಿಡಲಿ ನಾವು ಮಾಡಿದ ಕಾಯಕವಷ್ಟೇ ನಮಗೆ ಸಾಕು, ಎಂಬ ನಿಲುವುಳ್ಳವರು ಎಂಬುದರಲ್ಲಿ ಎರಡು ಮಾತಿಲ್ಲ. ರಾಗೌ ತಮ್ಮ ಕಾಯಕವನ್ನು ನಿಷ್ಠೆಯಿಂದ ಮಾಡಿ ನಿವೃತ್ತರಾಗಿ ಹದಿನೆಂಟು ವರ್ಷಗಳು ಕಳೆದರೂ ಇಂದಿಗೂ ಕೂಡ ಪರೀಕ್ಷೆ ಕಟ್ಟುವ ವಿದ್ಯಾರ್ಥಿಯಂತೆ ಓದುತ್ತಾರೆ, ಬರೆಯುತ್ತಾರೆ. ರಾಗೌ ತಮ್ಮ ಜೀವನದ ಅತ್ಯಂತ ನೋವಿನ ಸಂದರ್ಭದಲ್ಲೂ ವಿಚಲಿತರಾಗದೆ, ಧರ್ಮಪತ್ನಿಯನ್ನು ಸಂತೈಸುತ್ತಾ ಹೆಜ್ಜೆ ಹಾಕುತ್ತಿದ್ದಾರೆ. ಬದುಕಿನಲ್ಲಿಯ ಕಹಿಯನ್ನೆಲ್ಲ ಅಧ್ಯಯನ, ಬರವಣಿಗೆಯ ಮೂಲಕ ಕಡಿಮೆಮಾಡಿಕೊಳ್ಳುತ್ತಿದ್ದಾರೆ . ಅವರ ಬರವಣಿಗೆ ಹೀಗೆಯೇ ನಿರಂತರವಾಗಿ ಸಾಗುತ್ತಿರಲಿ ಎಂದು ಆಶಿಸೋಣ.